ರೈತರಿಗೆ ಉಚಿತ ವಿದ್ಯುತ್

160 (61) ಶ್ರೀ ಭರಮಗೌಡ (ರಾಜು) ಹಾಲಗೌಡ ಕಾಗೆ (ಕಾಗವಾಡ) :–ಮಾನ್ಯ ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ 10 ಹೆಚ್. ಪಿ. ವರೆಗಿನ ವಿದ್ಯುತ್‌ನ್ನು ಉಚಿತವಾಗಿ ನೀಡಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ, ಬೆಳಗಾವಿಯ ಅಥಣಿ ತಾಲ್ಲೂಕಿನ ಉಗಾರ ಖುರ್ದ ಸಹಕಾರ ನೀರಾವರಿ ಸಂಘದ ರೈತರು ಸಹಕಾರ ಸಂಘಗಳ ಮುಖಾಂತರ ಪಂಪ್‌ಸೆಟ್‌ಗಳಿಗೆ ಸಾಮೂಹಿಕವಾಗಿ 100 ರಿಂದ 200 ಹೆಚ್.ಪಿ. ವರೆಗೆ ವಿದ್ಯುತ್‌ನ್ನು ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ರೈತರು ಸಹಕಾರ ಸಂಘಗಳ ಮುಖಾಂತರ ಪಂಪ್‌ಸೆಟ್‌ಗಳಿಗೆ ಸಾಮೂಹಿಕವಾಗಿ ಅಂದರೆ ತಲಾ ಸುಮಾರು 3 ಹೆಚ್.ಪಿ. ಗಳಷ್ಟು ವಿದ್ಯುತ್‌ನ್ನು ಉಚಿತವಾಗಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಸದರಿ ಸಹಕಾರ ಸಂಘಗಳಿಂದ ರೈತರು ತಮ್ಮ ಪಂಪ್‌ಸೆಟ್‌ಗಳಿಗೆ ಬಳಸುವ ತಲಾ 3 ಹೆಚ್.ಪಿ. ವಿದ್ಯುತ್‌ನ್ನು ಉಚಿತವಾಗಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವಾಗ ಉಚಿತವಾಗಿ ವಿದ್ಯುತ್‌ನ್ನು ನೀಡಲಾಗುವುದು?

ಶೋಭಾ ಕರಂದ್ಲಾಜೆ (ಇಂಧನ ಸಚಿವರು):–

ಅ) ಮತ್ತು ಆ) ಹೌದು

ಇ) ಮತ್ತು ಈ) ರೈತರ ಸಹಕಾರ ಸಂಘದ ಹೆಸರಿನಲಿ ನೋಂದಾಯಿಸಲ್ಪಟ್ಟು ಒಟ್ಟು 10 ಹೆಚ್.ಪಿ. ಗಿಂತ ಹೆಚ್ಚು ಸಾಮರ್ಥ್ಯ ಹೊಂದಿರುವುದರಿಂದ, ತಲಾ ಸುಮಾರು 3 ಹೆಚ್.ಪಿ. ಸಾಮರ್ಥ್ಯ ಬಂದರೂ ಸಹ, ಹಾಲಿ ನಿಯಮಗಳ ಪ್ರಕಾರ ಉಚಿತ ವಿದ್ಯುತ್ ನೀಡಲು ಅವಕಾಶವಿರುವುದಿಲ್ಲ. ಆದಾಗ್ಯೂ ಇಂತಹ ಪ್ರಸ್ತಾವನೆಗಳು ಬಂದಿದ್ದು, ಈ ಕುರಿತು ವಿವರವಾಗಿ ಪರಿಶೀಲಿಸಿ ಸಾಧಕ–ಬಾಧಕಗಳ ಹಿನ್ನೆಲೆಯಲ್ಲಿ ನಿರ್ಧಾರ ಕೈಗೊಳ್ಳಬೇಕಾಗಿದೆ.

ಪಿ.ಎಸ್.ಐ. ಝಳಕಿ ಇವರಿಂದ ಅಕ್ರಮ ಮರಳುಗಾರಿಕೆ

162 (199) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) :–ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–